ಇಂದು ದಿನಾಂಕ 09.01.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟಿ ಸವಾಲುಃ ಜೆಡಿಆರ್ ಪರ ಶ್ರೀ ಯುಡಿಡಿ ವಕೀಲರಿಂದ

1. ನಾನು ಟೈಲರಿಂಗ್ ಕೆಲಸವನ್ನು ಸುಮಾರು 35 ವರ್ಷಗಳಿಂದ ಮಾಸೂರು ಮತ್ತು ಕೋಡಮಗ್ಗಿ ಗ್ರಾಮಗಳಲ್ಲಿ ಮಾಡಿರುತ್ತೇನೆ. ಯಡಗೋಡಿರವರ ಕುಟುಂಬದ ಪರಿಚಯ ನನಗೆ ಇರುವುದಿಲ್ಲ. ಬಸವಣ್ಣೆಪ್ಪ ಬ್ಯಾಡಗಿರವರ ಮನೆತನದವರ ಪರಿಚಯ ನಾನು ಚಿಕ್ಕವನಿದ್ದಾಗಿನಿಂದಲೂ ಇರುತ್ತದೆ. ನಾನು ಮತ್ತು ಡಿಹೆಚ್ಆರ್‌ರವರುಗಳು ಕೂಡಿ-ಆಡಿ ಬೆಳೆದಿರುತ್ತೇವೆ. ಬಸವಣ್ಣೆಪ್ಪನವರು ಅವರ ಮನೆಯಲ್ಲಿ ಆಗುವ ಶುಭ ಕಾರ್ಯಗಳಿಗೆ ಮತ್ತು ವ್ಯವಹಾರಗಳಿಗೆ ನನ್ನನ್ನು ಕರೆಯುತ್ತಾರೆ. ಆ ಕಾರಣದಿಂದ ಸದರಿಯವರ ಮನೆತನದ ಶುಭಕಾರ್ಯಗಳು ಮತ್ತು ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಬಸವಣ್ಣೆಪ್ಪನವರು ಖರೀದಿ ಮಾಡಿದ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇದೆ, ಆದರೆ ಆ ಸಮಯದಲ್ಲಿ ನಾನು ಚಿಕ್ಕವನಿದ್ದೆ.

2. ಡಿಕ್ರಿ ಆಸ್ತಿಯಲ್ಲಿರುವ ಮರಗಳು ಸುಮಾರು 50-60 ವರ್ಷ ಹಿಂದಿನವು ಆಗಿರುತ್ತವೆ. ಸರ್ವೆ ನಂಬರ್ಃ 60 ಮತ್ತು 66 ರ ನಡುವೆ ರಸ್ತೆ ಇದೆ ಎಂದು ಸೂಚಿಸುವುದು ಸರಿ. ಸದರಿ ರಸ್ತೆಯಲ್ಲಿ ತಂತಿ ಬೇಲಿಯು ಇರುವುದಿಲ್ಲ. ಡಿಕ್ರಿ ಆಸ್ತಿಯಲ್ಲಿ ಜೆಡಿಆರ್‌ರವರುಗಳು ತಂತಿ ಬೇಲಿ ಹಾಕಲು ಬಂದಿದ್ದರು ಎಂದು ನನ್ನ ಅರ್ಜಿಯಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿ. ಚೌಡಪ್ಪ ಯಡಗೋಡಿರವರು 2004 ರಲ್ಲಿ ಮರಣ ಹೊಂದಿರುವ ಬಗ್ಗೆ ನನಗೆ ಮಾಹಿತಿ ಇದೆ. ಜೆಡಿಆರ್‌ರವರು ಯಾವ ತಿಂಗಳು ಅಥವಾ ಯಾವ ವರ್ಷ ಡಿಕ್ರಿ ಆಸ್ತಿಯಲ್ಲಿ ತಂತಿ ಬೇಲಿ ಹಾಕಲು ಬಂದಿದ್ದರು ಎಂದು ಹೇಳಲಾಗುವುದಿಲ್ಲ. ಡಿಕ್ರಿ ಆಸ್ತಿಯಲ್ಲಿ ತಂತಿ ಬೇಲಿ ಹಾಕಲು ಶ್ರೀಧರ, ನಾಗರಾಜ, ತಾರಕೇಶ ಮತ್ತು ಜಗದೀಶರವರುಗಳು ಬಂದಿದ್ದರು.

3. ಡಿಕ್ರಿ ಆಸ್ತಿಯಲ್ಲಿ ಶ್ರೀಧರ, ನಾಗರಾಜ, ತಾರಕೇಶ ಮತ್ತು ಜಗದೀಶರವರು ಯಾವುದೇ ರೀತಿ ತಂತಿ ಬೇಲಿ ಹಾಕಲು ಬಂದಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ಫೋಟೋದಲ್ಲಿರುವ ತಂತಿ ಬೇಲಿಯು ಬಸವಣ್ಣೆಪ್ಪರವರ ಹೊಲದಲ್ಲಿದೆ ಎಂದು ಸೂಚಿಸುವುದು ಸರಿ. ನಾನು ಬಸವಣ್ಣೆಪ್ಪನವರಿಗೆ ವಿಶ್ವಾಸರ್ಹ ವ್ಯಕ್ತಿಯಾಗಿರುವುದರಿಂದ ಯಾವುದೇ ಘಟನೆಗಳು ನಡೆಯದೇ ಇದ್ದರೂ ಸಹ ಅವರಿಗೆ ಅನುಕೂಲವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.